

# ಡಾಕ್ಟರ್ ಸಾಹೇಬ್

## ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ‘ಜಂಟಲ್‌ಮೆನ್, ಮೀಟ್ ದಿ ನೆಕ್ಸ್ಟ್ ಪ್ರೈಮ್ ಮಿನಿಸ್ಟರ್’

ಭಾರತದ ರಾಜಕೀಯ ಪಕ್ಷಗಳು ಕೂಡ ಭಾರತದ ಮನುಷ್ಯರ ಥರವೇ! ಸೋತಾಗ ಕಟು ವಾಸ್ತವಗಳ ಅರಿವಾಗಿ ಒಂದು ಥರ ವರ್ತಿಸುತ್ತವೆ; ಗೆಲ್ಲಬಹುದು ಎಂಬ ಆಸೆ ಚಿಗುರಿದಾಗ ಮತ್ತೊಂದು ಥರ ಆಡುತ್ತವೆ!

1967ರ ಲೋಕಸಭಾ ಚುನಾವಣೆಗೆ ಮುನ್ನ ಬಹುತೇಕ ಕ್ಷೇತ್ರಗಳಲ್ಲಿ ವಿರೋಧಪಕ್ಷಗಳ ಸಾಮಾನ್ಯ ಅಭ್ಯರ್ಥಿಯನ್ನು ನಿಲ್ಲಿಸಲು ಲೋಹಿಯಾ ಪ್ರಯತ್ನಿಸಿದರು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಪಕ್ಷಗಳ ಸ್ವಾರ್ಥ ವಿಜೃಂಭಿಸಿತು; ಕಣ್ಣು ಮಬ್ಬಾಯಿತು! ಆ ಘಟ್ಟದ ವಿರೋಧ ಪಕ್ಷಗಳ ರಾಜಕೀಯ ಗೊಂದಲ ಕುರಿತು ಇಂದುಮತಿ ಕೇಳ್ಕರ್ ಬರೆಯುತ್ತಾರೆ:

‘ಸಂಯುಕ್ತ ಸಮಾಜವಾದಿ ಪಾರ್ಟಿ ಕಾಂಗ್ರೆಸ್‌ವಿರೋಧಿ ವೇದಿಕೆ ರೂಪಿಸಿ, ಕೆಲವು ಪಕ್ಷಗಳ ಸಭೆ ಕರೆಯಿತು. ಪ್ರಜಾ ಸೋಷಲಿಸ್ಟ್ ಪಾರ್ಟಿ, ಸ್ವತಂತ್ರ ಪಾರ್ಟಿ, ಜನಸಂಘಗಳು ಲೋಹಿಯಾರ ಜೊತೆ ಸಹಕರಿಸಲಿಲ್ಲ. ವಿರೋಧ ಪಕ್ಷಗಳ ಜಂಟಿ ವೇದಿಕೆಯೂ ಆಗಲಿಲ್ಲ; ರಾಷ್ಟ್ರಮಟ್ಟದಲ್ಲಿ ಚುನಾವಣಾ ಕ್ಷೇತ್ರಗಳ ಪರಸ್ಪರ ಹಂಚಿಕೆಯೂ ನಡೆಯಲಿಲ್ಲ. ಕೆಲವೆಡೆ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಹಾಗೂ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ಪಕ್ಷಗಳ ಜೊತೆಗೆ; ಕೆಲವೆಡೆ ಬಲಪಂಥೀಯ ಪಕ್ಷಗಳಾದ ಸ್ವತಂತ್ರ ಪಾರ್ಟಿ ಹಾಗೂ ಜನಸಂಘಗಳ ಜೊತೆಗೆ ಸಂಯುಕ್ತ ಸಮಾಜವಾದಿ ಪಕ್ಷದ ಸ್ಥಳೀಯ ಹೊಂದಾಣಿಕೆಗಳಾದವು.’

ಲೋಹಿಯಾ ಉತ್ತರಪ್ರದೇಶದ ಕನೌಜ್ ಕ್ಷೇತ್ರದಿಂದ ಚುನಾವಣೆಗೆ ನಿಂತರು. ಜಾರ್ಜ್ ಫರ್ನಾಂಡಿಸ್, ಮಧುಲಿಮಯೆ ಮೊದಲಾದ ಸಮಾಜವಾದಿಗಳೂ ಸ್ಪರ್ಧಿಸಿದರು. ಜೆ.ಎಚ್. ಪಟೇಲ್ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಿದರು.

ಚುನಾವಣೆ ನಡೆದು, ಮತಗಳ ಎಣಿಕೆ ಶುರುವಾಯಿತು. ಲೋಹಿಯಾ ಪಡೆದ ಮತಗಳ ಸಂಖ್ಯೆ ಏರುತ್ತಿತ್ತು, ಇಳಿಯುತ್ತಿತ್ತು. ಕೆಲವೆಡೆ ಪಕ್ಷದ ಅಭ್ಯರ್ಥಿಗಳ ಸೋಲು, ಗೆಲುವಿನ ಅಂತರ ತೆಳುವಾಗಿತ್ತು. ಲೋಹಿಯಾ ಗೆಲುವು ಹತ್ತಿರ ಬರುತ್ತಿತ್ತು; ದೂರವಾಗುತ್ತಿತ್ತು.

ಲೋಹಿಯಾ ರಮಾಮಿತ್ರರನ್ನು ಕೇಳಿದರು: ‘ನಾನು ಎಲೆಕ್ಷನ್‌ನಲ್ಲಿ ಸೋತರೆ ನಿನಗೆ ಬೇಜಾರಾಗುತ್ತೆ, ಅಲ್ವಾ?’

ಬೇಜಾರಿನ ಪ್ರಸಂಗ ಬರಲಿಲ್ಲ. ಕೊನೆಗೆ ಲೋಹಿಯಾ ಕೇವಲ 472 ಮತಗಳ ಅಂತರದಿಂದ ಗೆದ್ದರು. ಕಾರಣ, ಲೋಹಿಯಾರ ಕಾಂಗ್ರೆಸ್ಸೇತರವಾದಕ್ಕೆ ಅವರ ಕ್ಷೇತ್ರದಲ್ಲೇ ಹಿನ್ನಡೆಯಾಗಿತ್ತು. ವಿರೋಧ ಪಕ್ಷಗಳ ಮತಗಳು ಹರಿದು ಹಂಚಿಹೋಗಿದ್ದವು. ಲೋಹಿಯಾ 93578 ಮತಗಳನ್ನು ಗಳಿಸಿದ್ದರು; ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಸ್. ಎನ್. ಶರ್ಮ 93106 ಮತಗಳನ್ನು ಗಳಿಸಿದ್ದರು. ಜನಸಂಘದ ಎನ್. ಸಿಂಘ್‌ಗೆ 78296 ಮತಗಳು ಬಿದ್ದಿದ್ದರೆ, ಪ್ರಜಾ ಸೋಷಲಿಸ್ಟ್ ಪಾರ್ಟಿಯ ಎಸ್. ಕೃಷ್ಣರಿಗೆ 11080 ಮತಗಳು ಬಿದ್ದಿದ್ದವು.

ಹಿಂದಿ ಮಾತಾಡುವ ಪ್ರದೇಶಗಳಲ್ಲಿ ಕಾಂಗ್ರೆಸ್ ನೆಲೆ ಕಳೆದುಕೊಳ್ಳಲಿದೆ ಎಂದು ಲೋಹಿಯಾ ಹೇಳಿದ್ದು ನಿಜವಾಗಿತ್ತು. ಒಂಬತ್ತು ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಗಳೇ ಹೆಚ್ಚು ಗೆದ್ದಿದ್ದರು. ಆದರೆ ಕಾಂಗ್ರೆಸ್ 282 ಲೋಕಸಭಾ ಸ್ಥಾನಗಳನ್ನು ಪಡೆದು, ಸರಳ ಬಹುಮತದಿಂದ ಕೇಂದ್ರದಲ್ಲಿ ಮತ್ತೆ ಸರ್ಕಾರ ರಚಿಸಿತು.

ಕೆಲವು ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಒಕ್ಕೂಟಗಳು ಅಧಿಕಾರ ಹಿಡಿದವು. ಇವುಗಳನ್ನು ‘ಸಂಯುಕ್ತ ವಿಧಾಯಕ ದಳ’ (ಎಸ್.ವಿ.ಡಿ.) ಸರ್ಕಾರಗಳು ಎಂದು ಕರೆಯಲಾಯಿತು.

ಚುನಾವಣೆಯ ನಂತರದ ಮಾರ್ಚ್–ಏಪ್ರಿಲ್ ತಿಂಗಳ ‘ಮ್ಯಾನ್‌ಕೈಂಡ್’ ಸಂಚಿಕೆಯಲ್ಲಿ ಲೋಹಿಯಾ ಬರೆದರು:

‘ಬದಲಾವಣೆಯ ಗಾಳಿ ಬೀಸಲಾರಂಭಿಸಿದೆ. ಆದರೆ ಬದಲಾವಣೆಯ ದಿಕ್ಕು ಇನ್ನೂ ನಿರ್ಧಾರವಾಗಿಲ್ಲ. ಹೊಸ ಶಕ್ತಿಮೂಲಗಳೂ ಅಸ್ತಿತ್ವಕ್ಕೆ ಬಂದಿಲ್ಲ. ಹೊಸ ಶಕ್ತಿಮೂಲಗಳನ್ನು

